

## ಹಿಂದಿನ ಬುಟ್ಟಿಗಳು ಈಗಲೂ ಸುಸ್ಥಿತಿ

ಇವು ಹಿಂದಿನ ಕಾಲದ ಜನರು ಕೈಯಲ್ಲಿ ಹೆಣೆದ ಬುಟ್ಟಿಗಳು. ಬಹಳ ಕಾಲ ಜೊತೆಗಿರಿಸಿಕೊಳ್ಳುವಂತವು. ಹಿಂದಿನ ಕಾಲದಲ್ಲಿ ಹೆಚ್ಚು ಬಳಕೆಯಲ್ಲಿದ್ದ ಈ ಬುಟ್ಟಿಗಳು ಸದ್ಯ ಮರೆಗೆ ಸರಿದಿವೆ. ಅವುಗಳ ಸ್ಥಾನಕ್ಕೆ ಬ್ಯಾಗ್, ಬಾಕ್ಸ್, ಲಗೇಜು ಬ್ಯಾಗ್‌ಗಳು ಬಂದಿವೆ. ಹಳೆಯ ಬುಟ್ಟಿಗಳಲ್ಲಿ ದವಸ ಧಾನ್ಯ, ಸೇರಿದಂತೆ ಹಲವು ರೀತಿಯ ಸಾಮಗ್ರಿಗಳನ್ನು ಇಡಬಹುದು.

ಇವು ಕಂಡು ಬಂದಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ಎರ್ಮಾಳದ ಸುಬ್ರಹ್ಮಣ್ಯ ಗೌಡ ಅವರ ಮನೆಯಲ್ಲಿ. ಅವರ ಹಿರಿಯರು ಇವುಗಳನ್ನು ಬಳಸುತ್ತಿದ್ದರಂತೆ. ಈಚೆಗೆ ಅವರ ಮನೆಗೆ ಹೋಗಿದ್ದಾಗ ಇವುಗಳು ಕಣ್ಣಿಗೆ ಬಿದ್ದವು. ಈಗಲೂ ಸುಸ್ಥಿತಿಯಲ್ಲಿರುವ ಇವು ಬಳಕೆಯಿಂದಷ್ಟೇ ದೂರ ಸರಿದಿವೆ. ಇಂತಹ ಬುಟ್ಟಿಗಳು ಈಗ ಎಲ್ಲ ಕಡೆ ನೋಡಲು ಸಿಗುವುದು ತೀರಾ ವಿರಳ.

—ರಕ್ಷಿತಾ ಎ.ಜಿ. ಅನ್ನಡ್ಕ, ವಿವೇಕಾನಂದ ಕಾಲೇಜು ಪುತ್ತೂರು






## ನಂಬಿದ್ರೆ ನಂಬಿ.... ಬಿಟ್ರೆ ಬಿಡಿ!

‘ನ್ಯಾಷನಲ್ ಮೀಡಿಯಾ ಕೌನ್ಸಿಲ್’ನ ಹಿರಿಯ ರಾಷ್ಟ್ರೀಯ ಸಲಹೆಗಾರರು ಮೈಸೂರಿಗೆ ಬಂದು ತಮ್ಮ ಕಾರನ್ನು (ಕೆ.ಎ.55 ಎಂ.8879) ಕುವೆಂಪು ನಗರದ ಕಾಗಿನೆಲೆ ಸಂಸ್ಥೆಯ ಬಳಿ ನಿಲ್ಲಿಸಿ ಎಲ್ಲೋ ಯಾರಿಗೋ ಸಲಹೆ ನೀಡಲು ಹೋಗಿಬಿಟ್ಟಿದ್ದಾರೆ ಅನಿಸುತ್ತದೆ ಈ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿದಾಗ.

ಯಾರೋ ಪುಣ್ಯಾತ್ಮ ಕಾಗಿನೆಲೆ ಸಂಸ್ಥೆಯ ಬಳಿ ಕಾರನ್ನು ನಿಲ್ಲಿಸಿ ಕಾರನ್ನೇ ಮರೆತುಬಿಟ್ಟಿದ್ದಾರೆ. ಕಾರು 2–3 ತಿಂಗಳಿನಿಂದ ಕಾರು ಬಿಸಿಲು ಮಳೆ ಗಾಳಿಗೆ ಮೈಯೊಡ್ಡಿ ನಲುಗುತ್ತಿದೆ. ಕಾರಿನ ನೋಂದಣಿ ಫಲಕದ ಮೇಲೆ ‘ನ್ಯಾಷನಲ್ ಮೀಡಿಯಾ ಕೌನ್ಸಿಲ್’ ಎಂಬ ಲಾಂಛನವೂ ಇದೆ.

ಈ ಕಾರು ಮುಖ್ಯರಸ್ತೆಯಲ್ಲಿ ನಿಂತಿರುವುದರಿಂದ ಯಾರೂ ಪ್ರಶ್ನಿಸದಿರುವುದು ಆಶ್ಚರ್ಯ ಮೂಡಿಸಿದೆ. ಸಂಬಂಧಪಟ್ಟ ಸಂಚಾರ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಯಾವುದೇ ದೂರೂ ದಾಖಲಾಗಿಲ್ಲ. ವಿಪರ್ಯಾಸವೆಂದರೆ ನ್ಯಾಷನಲ್ ಮೀಡಿಯಾ ಕೌನ್ಸಿಲ್ ಎಂಬ ಹೆಸರೇ ಬೋಗಸ್ ಎಂಬ ವಿಚಾರ ಮಾಧ್ಯಮದ ಹಿರಿಯ ಮಿತ್ರರಿಂದ ತಿಳಿಯಿತು. ಸಂಬಂಧಪಟ್ಟ ಅಧಿಕಾರಿಗಳು ಕಾರಿನ ನೋಂದಣಿ ಸಂಖ್ಯೆ ಆಧರಿಸಿ ಮಾಲೀಕರನ್ನು ಪತ್ತೆ ಮಾಡಿ ಸ್ಥಳದಿಂದ ವಾಹನ ತೆರವು ಮಾಡಬೇಕಿದೆ. ಇದರಿಂದ ಸಂಚಾರಕ್ಕೆ ಆಗುತ್ತಿರುವ ತೊಡಕು ನಿವಾರಣೆಯಾಗುತ್ತದೆ.

—ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು